## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ನ್ಯಾಯಾಲಯ

## ಸಿದ್ದಾಪುರ

## ಸಿ.ಸಿ.  4/2024

| | |
|---|---|
| ಸಿ.ಡಬ್ಲ್ಯೂಃ | 10 |
| ಪಿ.ಡಬ್ಲ್ಯೂಃ | 7 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಪರಮೇಶ್ವರ ಪುಟ್ಟಾಗೌಡ |
| ತಂದೆ ಹೆಸರು | ಃ | ಪುಟ್ಟಾ ಬೀರಾ ಗೌಡ |
| ವಯಸ್ಸು | ಃ | 28  ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಕಟ್ಟೆಕೈ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 18–07–2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಮೃತ ಸುಬ್ರಾಯ ರಾಮಯ್ಯ ಹೆಗಡೆ ರವರು ಗೊತ್ತಿರುವುದಿಲ್ಲ.ನನಗೆ ಆರೋಪಿ ಗೊತ್ತಿರುತ್ತಾರೆ. ನನಗೆ ಚಾಸಾ-1 ಮತ್ತು 9 ರವರು ಗೊತ್ತಿರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಅಪಘಾತ ಆಗಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

ಪಾಟೀಸವಾಲುಃ  ಮಾನ್ಯ ಎ ಪಿ ಪಿ ರವರಿಂದ

ಆರೋಪಿ ನನಗೆ 10 ವರ್ಷಗಳಿಂದ ಗೊತ್ತಿರುತ್ತಾರೆ. ಆರೋಪಿ ನನ್ನ ದೂರದ ಸಂಬಂಧಿ ಇರುತ್ತಾರೆ.

ದಿಃ 08-11-2023 ರಂದು ನಾನು ಹಾಗೂ ಚಾಸಾ-9 ರವರು ಹೆರೂರು -ಶಿರಸಿ ರಸ್ತೆಯಲ್ಲಿ ಹೆರೂರುಕಡೆಯಿಂದ ಶಿರಸಿ ಕಡೆಗೆ ಬೈಕ್ ನಲ್ಲಿ ಹೋಗುತ್ತಿದ್ದಾಗ , ಬೆಳಿಗ್ಗೆ 7-45 ಗಂಟೆ ಸಮಯದಲ್ಲಿ ಆರೋಪಿಯು ಬೊಲೆರೊ ಪಿಕ್ ಅಪ್ ವಾಹನವನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಜಾಜ್ ಸಿಟಿ 100 ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಸಾ-1 ರವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಹಾಗೂ ಸುಬ್ರಾಯ ಹೆಗಡೆ ರವರು ತೀರಿಕೊಂಡಿದ್ದು, ನಂತರ ಆರೋಪಿ ವಾಹನವನ್ನು ನಿಲ್ಲಿಸದೇ ಚಲಾಯಿಸಿಕೊಂಡು ಹೋಗಿದ್ದು, ಈ ಘಟನೆಯನ್ನು ನಾನು ನೋಡಿರುತ್ತೇನೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಂತರ ನಾವು ಗಾಯಾಳುಗಳನ್ನು ಉಪಚರಿಸಿ ಶಿರಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಂತರ ದಿಃ 10-11-2023 ರಂದು ಮದ್ಯಾಹ್ಹ 3-35 ಗಂಟೆಗೆ ಸುಬ್ರಾಯ ರಾಮಯ್ಯ ಹೆಗಡೆ ರವರು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಘಟನೆ ಸಂಬಂದ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ಈಗ ಹೇಳಿಕೆ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಹೇಳಿಕೆ ನೀಡಿಲ್ಲ ಎಂದು ಹೇಳಿದ್ದರಿಂದ ಅಭಿಯೋಜನೆ ಪರವಾಗಿ ಅದನ್ನು ನಿಪಿ -21 ಎಂದು ಅದರಲ್ಲಿರುವ ಆಯ್ದು ಭಾಗವನ್ನು ಕ್ರಮವಾಗಿ ನಿ.ಪಿ-21(ಎ) ಎಂದು ಗುರುತಿಸಲಾಯಿತು.

ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಆರೋಪಿ ನಗೆ ಸಂಬಂದಿಕನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

**(** ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ